ಶ್ರೀ ಹೆಚ್. ಆಂಜನೇಯ :– ಮಾನ್ಯ ಛೇರ್ಮನ್‌ರವರೆ, ಶಿಕ್ಷಕರ ವರ್ಗಾವಣೆಯಲ್ಲಿ ಕೆಲವು ತಿದ್ದುಪಡಿಯಾಗಬೇಕಾಗಿದೆ.

ಛೇರ್ಮನ್ :– ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಹಂಪನಗೌಡ ಬಾದರ್ಲಿ :– ರೈತರ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಎನ್.ಎಸ್. ಬೋಸರಾಜ್ :– ರೈತರ ಬಗ್ಗೆ ಮಾತನಾಡಬೇಕಾಗಿದೆ. ಇವತ್ತಿನ ದಿವಸ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಜವಾಬ್ದಾರಿ ನೀವೇ ಆಗುತ್ತೀರಿ.

ಛೇರ್ಮನ್ :– ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಡುತ್ತೇನೆ. ಈಗ ಶೂನ್ಯವೇಳೆ ತೆಗೆದುಕೊಳ್ಳುತ್ತೇನೆ. ಮೊದಲಿಗೆ ಮಾನ್ಯ ಮಾಧುಸ್ವಾಮಿಯವರು ಮಾತನಾಡಿ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ : ಚಿತ್ರಕಲಾ ಪರಿಷತ್ತಿನಲ್ಲಿ 4ನೇ ವರ್ಷದ ಅಪ್ಲೈಡ್ ಡಾಟಾದಲ್ಲಿ 40 ಮಕ್ಕಳಿಗೆ ಪರೀಕ್ಷೆಗೆ ಕೂಡಲು ಅವಕಾಶ ನೀಡದಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ) :– ಚಿತ್ರಕಲಾ ಪರಿಷತ್‌ನಲ್ಲಿ ನಾಲ್ಕನೇ ವರ್ಷದ ಅಪ್ಲೈಡ್ ಡಾಟಾದಲ್ಲಿ 40 ಮಕ್ಕಳಿಗೆ ಪರೀಕ್ಷೆಗೆ ಅವಕಾಶ ಕೊಟ್ಟಿಲ್ಲ. ಅವರು ತಕ್ಷಣ ಫೀಯನ್ನು ತುಂಬಬೇಕಾಗಿದೆ. ಅವರಿಗೆ ಈವರೆಗೆ ಅಟೆಂಡೆನ್ಸ್ ಬಗ್ಗೆ ಬಿಗಿಯಾಗಿರಲಿಲ್ಲ. ಇದ್ದಕ್ಕಿದ್ದ ಹಾಗೆ 40 ಜನರಿಗೆ ಅಟೆಂಡೆನ್ಸ್ ಇಲ್ಲವೆಂದು ಈಗ ಹೇಳಿದರೆ ಹೇಗೆ? ಅವರು ನಾಳೆ ನಾಡಿದ್ದು ಪರೀಕ್ಷೆಗೆ ಹೋಗಬೇಕಾಗಿದೆ. ಇಲ್ಲದಿದ್ದರೆ ಇಷ್ಟೊಂದು ತುರ್ತಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಆ ಮಕ್ಕಳಿಗೆ ಅಟೆಂಡೆನ್ಸ್ ಕೊಡತಕ್ಕಂಥ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು. ಅವರು ನಾಲ್ಕನೇ ವರ್ಷದ ಅಪ್ಲೈಡ್ ಡಾಟಾನಲ್ಲಿರುವ ಮಕ್ಕಳು 5ನೇ ವರ್ಷದಲ್ಲಿ ಮತ್ತೇ ಅದೇ ಕಾಲೇಜಿನಲ್ಲಿ ಓದಬೇಕಾಗುತ್ತದೆ. ಆದ್ದರಿಂದ, ದಯಮಾಡಿ ವಿಶ್ವವಿದ್ಯಾಲಯಕ್ಕೆ ಒಂದು ಸೂಚನೆ ಕೊಟ್ಟು ಆ ಮಕ್ಕಳಿಗೆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಮತ್ತು ಫೀಯನ್ನು ತುಂಬಿಸಿಕೊಳ್ಳುವುದಕ್ಕೆ ಒಂದು ಸಬ್‌ಮಿಷನ್ ಮಾಡಿದ್ದಾರೆ. ಆದ್ದರಿಂದ ಆ ಸಬ್‌ಮಿಷನ್ಸ್ ತೆಗೆದುಕೊಳ್ಳುವುದಕ್ಕೆ ಏನಾದರು ಅವಕಾಶ ಮಾಡಿಕೊಡಬೇಕು. ಇದು ತುಂಬಾ ತುರ್ತಾಗಿರುವುದರಿಂದ ದಯಮಾಡಿ ಇದಕ್ಕೆ ಈಗಲೇ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) :– ಮಾನ್ಯ ಛೇರ್ಮನ್‌ರವರೆ, ಅಲ್ಲಿ 40 ಜನ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಅವಕಾಶ ಕೊಟ್ಟು ಕೆಲವರಿಗೆ

ಬಿಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಒಂದು ಕಾರಣದಿಂದ ವಿದ್ಯಾರ್ಥಿಗಳ ಜೀವನ ಹಾಳಾಗಬಾರದೆಂಬ ದೃಷ್ಟಿಯಿಂದ ಈ ಸಾರಿ ಅವರೆಲ್ಲರಿಗೂ ಅನುಮತಿ ಕೊಡಿ ಎಂದು ಮತ್ತೆ ಅಟೆಂಡೆನ್ಸ್ ಶಾರ್ಟೆಜ್ ಇದ್ದರೆ ಮತ್ತೊಂದು ಸಲ ತುಂಬಿಕೊಳ್ಳುವಂಥ ನಿಯಮವನ್ನು ಮಾಡಿ ಎಂಬ ಬಗ್ಗೆ ನಾಳೆ ದಿವಸ ವಿಶ್ವವಿದ್ಯಾಲಯಕ್ಕೆ ಡೈರೆಕ್ಷನ್ ಕೊಡುತ್ತೇನೆ.

ಆ) ವಿಷಯ :– ಉಡುಪಿಯ ಬಜೆ ಅಣೆಕಟ್ಟಿನಿಂದ ರೈತರಿಗೆ ನೀರನ್ನು ಕೊಡುವ ಬಗ್ಗೆ:

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಮಾನ್ಯ ಛೇರ್ಮನ್‌ರವರೆ, ಮೊನ್ನೆ ದಿವಸ ಒಂದು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಮುನಿಸಿಪಲ್ ಅಡ್ಮಿನಿಸ್ಟ್ರೇಶನ್ ಮಿನಿಸ್ಟ್ರರವರ ಹತ್ತಿರ ಉತ್ತರವನ್ನು ಕೊಡಿಸುತ್ತೇನೆಂದು ಆ ಸಂದರ್ಭದಲ್ಲಿ ಮಾನ್ಯ ಸಂಸದೀಯ ಸಚಿವರು ಹೇಳಿದ್ದರು. ಆದರೆ, ಅವರು ನಮಗೆ ಇದುವರೆಗೂ ಸಿಕ್ಕಿಲ್ಲ. ಆದ್ದರಿಂದ ಡಾ॥ ವಿ.ಎಸ್. ಆಚಾರ್ಯರವರು ಇಲ್ಲಿಯೇ ಇದ್ದಾರೆ. ಕೊನೇ ಪಕ್ಷ ಅವರಾದರೂ ಉತ್ತರ ಕೊಡಲಿ. ಏಕೆಂದರೆ, ಅವರು ಆ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ನಮ್ಮ ಬಜೆ ಅಣೆಕಟ್ಟಿನಿಂದ ಅಲ್ಲಿರತಕ್ಕಂಥ ರೈತರಿಗೆ ನೀರನ್ನು ಕೊಡುವ ಬಗ್ಗೆ ಹೇಳುತ್ತಿದ್ದೇನೆ. ಆದರೆ, ಉಡುಪಿ ಮುನಿಸಿಪಾಲಿಟಿಯವರು ಇದರ ಕಟ್‌ಔಟ್ ಅನ್ನು ತೆಗೆದಿದ್ದಾರೆ. ಕಟ್‌ಔಟ್ ತೆಗೆದು 10 ದಿವಸಕ್ಕೊಂದು ಸಾರಿ ನೀರು ಕೊಡುವ ಬಗ್ಗೆ ತೀರ್ಮಾನ ಮಾಡಿದ್ದಾರೆ. ನಾನು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ನಿನ್ನೆ ದಿವಸ ಅವರಿಗೆ ಕಟ್‌ಔಟ್ ಅನ್ನು ಸಹ ಕೊಟ್ಟಿಲ್ಲ. 10 ದಿವಸಕ್ಕೊಂದು ಸಾರಿ ನೀರು ಕೊಟ್ಟರೆ ರೈತರಿಗೆ ಸಾಕಾಗುವುದಿಲ್ಲ. ವಾರಕ್ಕೆ ಕೋನೇ ಪಕ್ಷ 3 ದಿವಸ ಅಥವಾ 2 ದಿವಸ ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ಅಲ್ಲಿನ ರೈತರ ತೋಟ ಮತ್ತು ಬೆಳೆ ನಾಶವಾಗುವ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬೇಡಿ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಹೇಳಬೇಕು.

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :– ಮಾನ್ಯ ಛೇರ್ಮನ್‌ರವರೆ, ಈ ಡ್ಯಾಂ ಅನ್ನು ಉಡುಪಿ ನಗರಕ್ಕೆ ನೀರು ಒದಗಿಸುವುದಕ್ಕೋಸ್ಕರ ಕಟ್ಟಿರತಕ್ಕಂಥದು. ಇದು ತಮಗೂ ಸಹ ಗೊತ್ತಿದೆ. 1972 ರಲ್ಲಿ ಒಂದು ಡ್ಯಾಂ ಅನ್ನು ಕಟ್ಟಲಾಯಿತು ಮತ್ತೆ ಇತ್ತೀಚೆಗೆ ಎರಡನೇ ಡ್ಯಾಂ ಅನ್ನು ಕಟ್ಟಲಾಗಿದೆ. ಅಲ್ಲಿ ನಗರ ಬೆಳೆದಿದೆ ಮತ್ತು ಜನಸಂಖ್ಯೆ ಕೂಡ ಜಾಸ್ತಿಯಾಗಿದೆ. ಹಾಗೆಯೇ, ಮಲ್ಪೆ ಮತ್ತು ಮಣಿಪಾಲ ಜಾಗ ಕೂಡ ಇದಕ್ಕೆ ಸೇರಿದೆ. ತಮಗೆ ಗೊತ್ತಿರುವ ಹಾಗೆ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ಇದೆ. ಎರಡನೆಯದು ಕೃಷಿಗೆ ಮತ್ತು ಮೂರನೆಯದು ಐಡಲ್‌ಗೆ ನಾಲ್ಕನೆಯದು